**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಚಾಮರಾಜನಗರ.**

ದಿನಾಂಕ 20 ನೇ ಜುಲೈ 2024

**ಉಪಸ್ಥಿತರು**

**ಶ್ರೀ.ವೆಂಕಟೇಶ.ಎನ್, ಬಿ.ಎ.ಎಲ್.ಎಲ್.ಬಿ., ಎಲ್ಎಲ್ ಎಮ್.,**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಚಾಮರಾಜನಗರ.

## ಸಿ.ಮಿಸ್ ನಂ. 89/2024

**ಅರ್ಜಿದಾರರುಃ** **ಮೇಘಾ.ಪಿ** , 23 ವರ್ಷ,
ಕೋಂ ದಿವಾಕರ್.ಎಂ ,
ವಾಸಃ 2ನೇ ಕ್ರಾಸ್,
ಸೋಮಣ್ಣ ಲೇಔಟ್ ,
ಚಾಮರಾಜನಗರ ಪಟ್ಟಣ .

**(ಪರವಾಗಿ ಶ್ರೀ. ಎ.ಎಸ್.ಎಸ್.ಆರ್ ,ವಕೀಲರು)**

**ವಿರುದ್ಧ**

**ಎದುರುದಾರರುಃ** **ದಿವಾಕರ್.ಎಂ** , 27 ವರ್ಷ,
ಬಿನ್ ಆರ್.ಮಹೇಶ್ ,
ಪಾರ್ವತಿ ನಿಲಯ,
ಪಿಳ್ಳೈ ಲೇ ಔಟ್, 3ನೇ ಕ್ರಾಸ್,
ವರ್ತಕರ ಭವನದ ಹಿಂಭಾಗ,
ಚಾಮರಾಜನಗರ ಪಟ್ಟಣ.

**(ಪರವಾಗಿ ಶ್ರೀ ಕೆ.ಆರ್.ಕೆ ,ವಕೀಲರು)**

**ಮಧ್ಯಂತರ ಅರ್ಜಿ 1ರ ಮೇಲಿನ ಆದೇಶ**

ಅರ್ಜಿದಾರರು ಎದುರುದಾರರ ವಿರುದ್ಧ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯ ಸಂರಕ್ಷಣಾ ಕಾಯ್ದೆ 2005ರ ಕಲಂ 12 ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಕಲಂ.23(2)ರಡಿಯಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ, ಈ ಪ್ರಕರಣ ಮುಕ್ತಾಯ ಆಗುವವರೆಗೆ ಮಾಸಿಕ ರೂ.15,000/-ಗಳ ಮಧ್ಯಂತರ ಜೀವನಾಂಶವನ್ನು ಎದುರುದಾರರಿಂದ ಕೋರಿರುತ್ತಾರೆ.

**2. ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ಅರ್ಜಿದಾರರ ಮತ್ತು ಎದುರುದಾರರ ವಿವಾಹವು ದಿನಾಂಕಃ 07.03.2021 ರಂದು ಚಾಮರಾಜನಗರ ಪಟ್ಟಣದ ಎಲ್.ಐ.ಸಿ. ಆಫೀಸ್ ಹಿಂಭಾಗದ ನಂದಿ ಭವನದಲ್ಲಿ ಹಿಂದೂ ಸಂಪ್ರದಾಯದಂತೆ ನೆರವೇರಿರುತ್ತದೆ. ಅರ್ಜಿದಾರರ ಕುಟುಂಬದವರು ಎದುರುದಾರರಿಗೆ ರೂ.1,50,000/-ಗಳ ನಗದು, 6 ಗ್ರಾಂ ನ ಒಂದು ಉಂಗುರ, 15 ಗ್ರಾಂ ನ ಬ್ರಾಸ್‌ಲೆಟ್, 17 ಗ್ರಾಂ ನ ಕತ್ತಿನ ಚೈನ್ ಹಾಗೂ ವಾಚನ್ನು ವರದಕ್ಷಿಣೆಯಾಗಿ ಹಾಗೂ ವಿವಾಹಕ್ಕೆ ಬೇಕಾದ ಬಟ್ಟೆ ಹಾಗೂ ಇತರ ವಸ್ತುಗಳನ್ನು ಮದುವೆಯ ಸಮಯದಲ್ಲಿ ನೀಡಿರುತ್ತಾರೆ.

2. ಅರ್ಜಿದಾರರು ಮದುವೆಯಾದ ನಂತರ ಎದುರುದಾರರ ಜೊತೆಯಲ್ಲಿ ಒಂದು ವರ್ಷದವರೆಗೆ ಎದುರುದಾರರ ಮನೆಯಲ್ಲೆ ಸಾಂಸಾರಿಕ ಜೀವನವನ್ನು ನಡೆಸಿಕೊಂಡು ಬಂದಿರುತ್ತಾರೆ. ನಂತರ ಎದುರುದಾರನು ಮತ್ತು ಅವರ ಮನೆಯವರು ಅರ್ಜಿದಾರರಿಗೆ ವರದಕ್ಷಿಣೆ ತರುವಂತೆ ಕಿರುಕುಳ ನೀಡಲು ಪ್ರಾರಂಬಿಸಿ,ರುತ್ತಾರೆ. ಅಲ್ಲದೆ ಎದುರುದಾರನು ತನಗೆ ಅರ್ಜಿದಾರರನ್ನು ಮದುವೆಯಾಗಲು ಇಷ್ಟ ಇರಲಿಲ್ಲ ಎಂಬುದಾಗಿ ಸಹಾ ತಿಳಿಸಿರುತ್ತಾನೆ. ನಂತರ ಎದುರುದಾರನು ಹೇಳದೆ ಕೇಳದೆ ಮನೆ ಬಿಟ್ಟು ಹೊರಟು ಹೋಗಿರುತ್ತಾನೆ. ನಂತರ ಎದುರುದಾರನ ತಂದೆ ತಾಯಿ ಅರ್ಜಿದಾರರನ್ನು ಮನೆಯಿಂದ ಹೊರ ಹಾಕಿರುತ್ತಾರೆ.

3. ಮುಂದುವರಿದು ಅರ್ಜಿದಾರರು ನಿವೇದಿಸಿಕೊಳ್ಳುವುದೇನೆಂದರೆ, ಎದುರುದಾರರನು ಖಾಸಗಿ ಕಂಪನಿಯಹಲ್ಲಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ ಸುಮಾರು 25 ರೂಪಾಯಿ ಸಂಪಾದನೆ ಇರುತ್ತದೆ ಅಲ್ಲದೆ ಎದುರುದಾರನ ತಂದೆಯ ಹೆಸರಿನಲ್ಲಿ ಮನೆ ಮತ್ತು ನಿವೇಶನಗಳು ಇರುತ್ತವೆ. ಅರ್ಜಿದಾರರಿಗೆ ಯಾವುದೇ ಉದ್ಯೋಗವಿರುವುದಿಲ್ಲ ಹಾಗೂ ಯಾವುದೇ ಆದಾಯದ ಮೂಲಗಳಿರುವುದಿಲ್ಲ. ಆದ್ದರಿಂದ ಮಧ್ಯಂತರ ಜೀವನಾಂಶವನ್ನು ಕೊಡಿಸುವಂತೆ ಕೇಳಿಕೊಂಡಿರುತ್ತಾರೆ.

**4. ಸದರಿ ಪ್ರಕರಣದಲ್ಲಿ ಎದುರುದಾರರು ತಮ್ಮ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಕೊಂಡಿರುತ್ತಾರೆ. ಎದುರುದಾರರು ತನ್ನ ಹಾಗೂ ಅರ್ಜಿದಾರರ**

**ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ. ಅರ್ಜಿಯಲ್ಲಿ ಹಾಗೂ ಮಧ್ಯಂತರ ಅರ್ಜಿಯಲ್ಲಿ ತಿಳಿಸಿರುವ ಇತರೆ ಅಂಶಗಳನ್ನು ಅಲ್ಲಗಳೆದಿರುತ್ತಾರೆ.**

5. ಎದುರುದಾರರು ತನ್ನ ತಕರಾರಿನಲ್ಲಿ ತನ್ನ ಮತ್ತು ಅರ್ಜಿದಾರರ ವೈವಾಹಿಕ ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ ಆದರೆ ಸದರಿ ಅರ್ಜಿಯಲ್ಲಿ ತಿಳಿಸಿರುವ ಇತರೆ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರ ಪ್ರಕಾರ ಅರ್ಜಿದಾರರು ಒಬ್ಬ ಗೃಹಿಣಿಯಾಗಿ ತನ್ನ ಕರ್ತವ್ಯವನ್ನು ನೆರವೇರಿಸಿರುವುದಿಲ್ಲ. ಅರ್ಜಿದಾರರು ತಮ್ಮ ತಂದೆ ತಾಯಿಯ ಮಾತು ಕೇಳಿ ಎದುರುದಾರರ ಜೊತೆ ಸಂಸಾರ ಮಾಡದೆ ನಿರ್ಲಕ್ಷ್ಯ ಮಾಡಿರುತ್ತಾರೆ. ಅರ್ಜಿದಾರರು ಎದರುದಾರನ ವಿರುದ್ಧ ಪೊಲೀಸರಿಗೆ ಸುಳ್ಳು ದೂರನ್ನು ನೀಡಿರುತ್ತಾರೆ. ಎದುರುದಾರನಿಗೆ ತೊಂದರೆ ನೀಡುವ ಉದ್ದೇಶದಿಂದ ಅರ್ಜಿದಾರರು ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ವಿದ್ಯಾವಂತರಾಗಿದ್ದು, ಅವರ ತಂದೆ ಸಹಾ ಆರ್ಥಿಕವಾಗಿ ಸಬಲರಾಗಿರುತ್ತಾರೆ. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಎದುರುದಾರರು ಪ್ರಾರ್ಥಿಸಿಕೊಳ್ಳುತ್ತಾರೆ.

**6. ಅರ್ಜಿದಾರರ ಅರ್ಜಿ ಹಾಗೂ ಎದುರುದಾರರ ತಕರಾರು ಮತ್ತು ಈ ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತು ಉಭಯ ಪಕ್ಷಗಾರರ ವಾದವನ್ನ ಆಲಿಸಿದ ನಂತರ, ಈ ಕೆಳಕಂಡ ಅಂಶಗಳು ಉದ್ಭವಿಸುತ್ತದೆ.**

**ಅಂಶಗಳು**

**1. ಅರ್ಜಿದಾರರು ಮಧ್ಯಂತರ ಜೀವನಾಂಶ ಕುರಿತು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬಹುದೇ?**

**2. ಯಾವ ಆದೇಶ?**

7. ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ:1: **ಸಕಾರಾತ್ಮಕವಾಗಿ**

ಅಂಶ ಸಂಖ್ಯೆ:2: **ಅಂತಿಮ ಆದೇಶದಂತೆ**

**ಕಾರಣಗಳು**

8. **ಅಂಶ ಸಂಖ್ಯೆ 1** :- ಸದರಿ ಈ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ಜೀವನಾಂಶಕ್ಕಾಗಿ ಮೂಲ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ಅದರೊಂದಿಗೆ ಮಧ್ಯಂತರ ಜೀವನಾಂಶ ಕೋರಿ ಎದುರುದಾರನ ವಿರುದ್ಧ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಪ್ರಕರಣ ಏನೆಂದರೆ, ಎದುರುದಾರರು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ತನ್ನನ್ನು ಮನೆಯಿಂದ ಹೊರಗೆ ಹಾಕಿದ್ದು, ತನಗೆ ಯಾವುದೇ ಸಂಪಾದನೆ ಇಲ್ಲದ ಕಾರಣ ಎದುರುದಾರರು ಜೀವನಾಂಶ ನೀಡಲು ಬದ್ದರಾಗಿರುತ್ತಾರೆ. ಎದುರುದಾರರ ವಾದವೇನೆಂದರೆ ತಾನು ಅರ್ಜಿದಾರಳಿಗೆ ಯಾವುದೇ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುವುದಿಲ್ಲ ಮತ್ತು ಆಕೆ ತಾನಾಗಿಯೇ ಎದುರುದಾರರ ಮನೆಯಿಂದ ಹೊರಗೆ ಹೋಗಿರುತ್ತಾರೆ.

9. ಅರ್ಜಿದಾರರು ಮತ್ತು ಎದುರುದಾರರ ಸಂಬಂಧದ ಬಗ್ಗೆ ವಿವಾದ ಇರುವುದಿಲ್ಲ. ಅರ್ಜಿದಾರರು ಪ್ರತ್ಯೇಕವಾಗಿ ವಾಸ ಮಾಡುತ್ತಿರುವುದಾಗಿ ಎದುರುದಾರರು ಒಪ್ಪಿಕೊಂಡಿರುತ್ತಾರೆ. ಅರ್ಜಿದಾರರ ವಾದವೇನೆಂದರೆ, ಎದುರುದಾರನು ತಿಂಗಳಿಗೆ 25 ಸಾವಿರ ರೂಗಳ ಸಂಪಾದನೆ ಹೊಂದಿರುತ್ತಾನೆಂದು, ಅಲ್ಲದೆ ಅವರ ತಂದೆ ಮನೆ ಮತ್ತು ನಿವೇಶನವನ್ನು ಹೊಂದಿರುತ್ತಾರೆ. ಆದರೆ ಎದುರುದಾರನು ಇದನ್ನು ನಿರಾಕರಿಸಿ, ತನಗೆ ಅಷ್ಟು ಆದಾಯವಿರುವುದಿಲ್ಲ ಎಂದು ತಿಳಿಸಿದ್ದು, ಆದರೆ ತನಗೆ ಎಷ್ಟು ಆದಾಯವಿದೆ ಎಂದು ಹೇಳಿರುವುದಿಲ್ಲ.

10. ಎದುರುದಾರರು ತನಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿರುತ್ತಾರೆ ಎಂಬುದು ಅರ್ಜಿದಾರರ ವಾದ. ಎದುರುದಾರರು ಈ ಆರೋಪವನ್ನು ನಿರಾಕರಿಸಿರುತ್ತಾರೆ. ಅರ್ಜಿದಾರಳು ತಾನೇ ಸ್ವ-ಇಚ್ಚೆಯಿಂದ ಮನೆಯಿಂದ ಹೊರ ಹೋಗಿರುತ್ತಾರೆ ಎಂಬುದು ಎದುರುದಾರರ ವಾದ. ಅರ್ಜಿದಾರರ ಮತ್ತು ಎದುರುದಾರರ ಆರೋಪ ಪ್ರತ್ಯಾರೋಪಗಳನ್ನು ಸೂಕ್ತ ಸಾಕ್ಷ್ಯಗಳ ಮೂಲಕ ನಿರೂಪಿಸಬೇಕಾಗಿರುತ್ತದೆ. ಪೂರ್ಣ ಪ್ರಮಾಣದ ವಿಚಾರಣೆಯಾದ ನಂತರ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬಹುದಾಗಿರುತ್ತದೆ. ಎದುರುದಾರನು ತನಗೆ ಎಷ್ಟು ಆದಾಯ ಇದೆ ಎಂಬುದನ್ನು ಹೇಳಿರುವುದಿಲ್ಲ. ಎದುರುದಾರನು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರುತ್ತಾನೆ. ಅಲ್ಲದೆ ಈ ಹಂತದಲ್ಲಿ ಅರ್ಜಿದಾರಳಿಗೆ ಯಾವುದೇ ಆದಾಯ

ಇರುವುದಿಲ್ಲ ಎಂದು ಮೇಲ್ನೋಟದಿಂದ ಕಂಡು ಬರುತ್ತದೆ. ಅರ್ಜಿದಾರರಿಗೆ ಆಹಾರ, ವಸತಿ, ಇತ್ಯಾದಿಗಳಿಗಾಗಿ ಹಣಕಾಸಿನ ಅವಶ್ಯಕತೆ ಇರುತ್ತದೆ. ಎದುರುದಾರನು ಅರ್ಜಿದಾರಳ ಪತಿಯಾಗಿ ಆಕೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಜವಬ್ದಾರಿ ಹೊಂದಿರುತ್ತಾನೆ. ಇಬ್ಬರು ಪಕ್ಷಗಾರರ ಸಂಪಾದನೆ ವಾಸ್ತವವಾಗಿ ಎಷ್ಟು ಇದೆ ಎಂಬ ಬಗ್ಗೆ ಪೂರ್ಣ ಪ್ರಮಾಣದ ವಿಚಾರಣೆಯ ನಂತರ ತಿಳಿಯಬಹುದಾಗಿರುತ್ತದೆ. ಈ ಎಲ್ಲಾ ಸಂಗತಿಗಳನ್ನು ಅವಲೋಕಿಸಿದಾಗ ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಅರ್ಜಿದಾರರಿಗೆ ತಿಂಗಳಿಗೆ ರೂ.4,000–00 (ನಾಲ್ಕು ಸಾವಿರ ರೂಪಾಯಿಗಳು ಮಾತ್ರ)ಗಳ ಮಧ್ಯಂತರ ಜೀವನಾಂಶವನ್ನು ಈ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಪ್ರಕರಣ ಮುಗಿಯುವವರೆಗೆ ನೀಡುವಂತೆ ಎದುರುದಾರನಿಗೆ ಆದೇಶಿಸಿವುದು ಸೂಕ್ತವಾಗಿರುತ್ತದೆ. ಆದ್ದರಿಂದ ಅಂಶ–1 ನ್ನು ***ಸಕಾರಾತ್ಮಕವಾಗಿ*** ಉತ್ತರಿಸಲಾಗಿದೆ.

11. **ಅಂಶ ಸಂಖ್ಯೆ 2:–** ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಅಂತಿಮ ಆದೇಶ ಈ ಕೆಳಕಂಡಂತೆ ಇದೆ.

## ಮಧ್ಯಂತರ ಅರ್ಜಿ 1ರ ಮೇಲಿನ ಆದೇಶ

ಅರ್ಜಿದಾರರು ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯ ಸಂರಕ್ಷಣಾ ಕಾಯ್ದೆ ಕಲಂ 23(2) ರ ರೀತ್ಯಾ

ಸಲ್ಲಿಸಿರುವ ಮಧ್ಯಂತರ ಅರ್ಜಿ 1ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಅರ್ಜಿದಾರಳಿಗೆ ತಿಂಗಳಿಗೆ **ರೂ.4,000/- (ನಾಲ್ಕು ಸಾವಿರ ರೂಪಾಯಿಗಳು ಮಾತ್ರ)** ಮಧ್ಯಂತರ ಜೀವನಾಂಶವನ್ನು ಮಧ್ಯಂತರ ಅರ್ಜಿಯು ಸಲ್ಲಿಸಿದ ದಿನಾಂಕದಿಂದ ಈ ಪ್ರಕರಣ ಇತ್ಯರ್ಥವಾಗುವರೆಗೆ ನೀಡಲು ಎದುರುದಾರನಿಗೆ ನಿರ್ದೇಶಿಸಲಾಗಿರುತ್ತದೆ.

ಖರ್ಚಿನ ಬಗ್ಗೆ ಆದೇಶವಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರಿಂದ ಬೆರಳಚ್ಚು ಮಾಡಲ್ಪಟ್ಟಿದ್ದು ನನ್ನಿಂದ ತಿದ್ದುಪಡಿಯಾಗಿದ್ದು, ಬಹಿರಂಗ ನ್ಯಾಯಾಲಯದಲ್ಲಿ 20ನೇ ಜುಲೈ 2024 ರಂದು ಘೋಷಿಸಲಾಯಿತು)

(ಶ್ರೀವೆಂಕಟೇಶ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಚಾಮರಾಜನಗರ.